# ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ – 2022 ರಲ್ಲಿ ಕಾನ್‌ಸ್ಟೇಬಲ್/ಡ್ರೈವರ್ ಮತ್ತು ಕಾನ್‌ಸ್ಟೇಬಲ್/ಡಿಸಿಪಿಓ (ಡ್ರೈವರ್ಸ್ ಫಾರ್ ಫೈರ್ ಸರ್ವೀಸ್) ನೇಮಕಾತಿ

ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯಲ್ಲಿನ ಕೆಳಕಂಡ ತಾತ್ಕಾಲಿಕ ಕಾನ್‌ಸ್ಟೇಬಲ್/ಡ್ರೈವರ್ ಮತ್ತು ಕಾನ್‌ಸ್ಟೇಬಲ್/ಡ್ರೈವರ್–ಕಂ–ಪಂಪ್–ಆಪರೇಟರ್ (ಡ್ರೈವರ್ ಫಾರ್ ಫೈರ್ ಸರ್ವೀಸಸ್) ಹುದ್ದೆಗಳನ್ನು **ವೇತನ ಶ್ರೇಣಿ–3** ರಲ್ಲಿನ **ವೇತನ ಶ್ರೇಣಿ (ರೂ. 21,700 – 69,100)** + ಕೇಂದ್ರ ಸರ್ಕಾರಿ ಉದ್ಯೋಗಿಗಳಿಗೆ ಕಾಲಕಾಲಕ್ಕೆ ನೀಡಲಾಗುವ ಸಾಮಾನ್ಯ ಮತ್ತು ಅರ್ಹ ಭತ್ಯೆಗಳ ಮೇರೆಗೆ ಭರ್ತಿ ಮಾಡಿಕೊಳ್ಳಲು **ಪುರುಷ ಭಾರತೀಯ ನಾಗರಿಕರಿಂದ** ಆನ್‌ಲೈನ್ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಹುದ್ದೆಯ ಹೆಸರು | ಪ್ರವರ್ಗ | | | | | | |
|---|---|---|---|---|---|---|---|
| | ಯುಆರ್ [ಎ] | ಎಸ್‌ಸಿ [ಬಿ] | ಎಸ್‌ಟಿ [ಸಿ] | ಒಬಿಸಿ [ಡಿ] | ಇಡಬ್ಲ್ಯುಎಸ್ [ಇ] | ಒಟ್ಟು [ಎಫ್] | ಇಎಸ್‌ಎಂ [ಎಫ್] ನ 10% |
| ಕಾನ್‌ಸ್ಟೇಬಲ್/ಡ್ರೈವರ್ – ನೇರ | **76** | **27** | **13** | **49** | **18** | **183** | **18** |
| ಕಾನ್‌ಸ್ಟೇಬಲ್/(ಡ್ರೈವರ್–ಕಂ–ಪಂಪ್–ಆಪರೇಟರ್) (ಎಂದರೆ ಡ್ರೈವರ್ ಫಾರ್ ಫೈರ್ ಸರ್ವೀಸಸ್) – ನೇರ | **111** | **40** | **19** | **72** | **26** | **268** | **27** |
| ಒಟ್ಟು | **187** | **67** | **32** | **121** | **44** | **451** | **45** |

ಆನ್‌ಲೈನ್ ಅರ್ಜಿ ಸಲ್ಲಿಸುವ ಸಮಯದಲ್ಲಿ ಈ ಮುಂದಿನ ಅರ್ಹತಾ ಷರತ್ತುಗಳನ್ನು ಪೂರೈಸಬಲ್ಲ ಅಭ್ಯರ್ಥಿಗಳನ್ನು ಪರಿಗಣಿಸಲಾಗುತ್ತದೆ **– ಪ್ರಾಯ (22.02.2023 ರಂತೆಗೆ)** – 21 ಮತ್ತು 27 ವರ್ಷದೊಳಗೆ ಇರಬೇಕು. ಸಡಿಲಿಕೆ:–

(1) ಎಸ್/ಎಸ್‌ಟಿ ಅಭ್ಯರ್ಥಿಗಳಿಗೆ 5 ವರ್ಷಗಳವರೆಗೆ
(2) ಒಬಿಸಿ ಅಭ್ಯರ್ಥಿಗಳಿಗೆ 3 ವರ್ಷಗಳವರೆಗೆ
(3) ಸಿಐಎಸ್‌ಎಫ್ ಸಿಬ್ಬಂದಿ ಸೇರಿದಂತೆ ಸರ್ಕಾರಿ ಉದ್ಯೋಗಿಗಳಿಗೆ – ಸಾಮಾನ್ಯ ಮತ್ತು ಒಬಿಸಿ ಅಭ್ಯರ್ಥಿಗಳಿಗೆ 40 ವರ್ಷಗಳವರೆಗೆ ಹಾಗೂ ಎಸ್‌ಸಿ/ಎಸ್‌ಟಿ ಅಭ್ಯರ್ಥಿಗಳಿಗೆ 45 ವರ್ಷಗಳವರೆಗೆ.

**ಶೈಕ್ಷಣಿಕ ಮತ್ತು ಇನ್ನಿತರ ಅರ್ಹತೆಗಳು:–**

(1) ಮಾನ್ಯತೆ ಪಡೆದಿರುವ ಮಂಡಳಿಯ ಮೆಟ್ರಿಕ್ಯುಲೇಶನ್ ಅಥವಾ ತತ್ಸಮಾನ
(2) ಅಧಿಕೃತ ಡ್ರೈವಿಂಗ್ ಲೈಸನ್ಸ್ – (ಎ) ಹೆವಿ ಮೋಟಾರ್ ವೆಹಿಕಲ್ ಅಥವಾ ಟ್ರಾನ್ಸ್‌ಪೋರ್ಟ್ ವೆಹಿಕಲ್; (ಬಿ) ಲೈಟ್ ಮೋಟಾರ್ ವೆಹಿಕಲ್ ಮತ್ತು (ಸಿ) ಮೋಟಾರ್ ಸೈಕಲ್ ವಿದ್ ಗೇರ್ ಹೊಂದಿರಬೇಕು.
(3) ಅರ್ಜಿ ಕೊನೆಯ ದಿನಾಂಕದೊಳಗೆ ಹೆವಿ ಮೋಟಾರ್ ವೆಹಿಕಲ್ ಅಥವಾ ಟ್ರಾನ್ಸ್‌ಪೋರ್ಟ್ ವೆಹಿಕಲ್ ಅಥವಾ ಲೈಟ್ ಮೋಟಾರ್ ವೆಹಿಕಲ್ ಮತ್ತು ಮೋಟಾರ್ ಸೈಕಲ್ ಡ್ರೈವಿಂಗ್‌ನಲ್ಲಿ 03 ವರ್ಷಗಳ ಅನುಭವ ಹೊಂದಿರಬೇಕು.

**ದೈಹಿಕ ಮಾನದಂಡಗಳು:–**

| | | ಎತ್ತರ | ಎದೆ |
|---|---|---|---|
| ಎ). | ಸಾಮಾನ್ಯ, ಎಸ್‌ಸಿ ಮತ್ತು ಒಬಿಸಿ ಅಭ್ಯರ್ಥಿಗಳು | 167 ಸೆಂ.ಮೀ. | 80 ಸೆಂ.ಮೀ. ಕನಿಷ್ಠ ಹಿಗ್ಗುವಿಕೆ 05 ಸೆಂ.ಮೀ. ಎಂದರೆ **80 – 85 ಸೆಂ.ಮೀ.** |
| ಬಿ). | ಸಡಿಲಿಕೆ ಮಾನದಂಡಗಳು:– ಘರ್‌ವಾಲಿ, ಕುಮಾವೊನಿ, ಗೂರ್ಖಾ, ಡೊಗ್ರಾ, ಮರಾಠ ಅಭ್ಯರ್ಥಿಗಳಿಗೆ ಮತ್ತು ಸಿಕ್ಕಿಂ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ, ಮಣಿಪುರ, ತ್ರಿಪುರ, ಮಿಜೋರಾಂ, ಮೇಘಾಲಯ, ಅಸ್ಸಾಂ, ಹಿಮಾಚಲ ಪ್ರದೇಶ ಹಾಗೂ ಜಮ್ಮು ಮತ್ತು ಕಾಶ್ಮೀರ ರಾಜ್ಯಗಳ ಮೂಲದ ಅಭ್ಯರ್ಥಿಗಳಿಗೆ ನಿರ್ದಿಷ್ಟ ನಮೂನೆಯ ಪ್ರಮಾಣಪತ್ರ ಹಾಜರುಪಡಿಸುವ ನಿಬಂಧನೆಯ ಮೇರೆಗೆ | 160 ಸೆಂ.ಮೀ. | 78 ಸೆಂ.ಮೀ. ಕನಿಷ್ಠ ಹಿಗ್ಗುವಿಕೆ 05 ಸೆಂ.ಮೀ. ಎಂದರೆ **78 – 83 ಸೆಂ.ಮೀ.** |
| ಸಿ). | ಪರಿಶಿಷ್ಟ ಪಂಗಡಗಳಿಗೆ ಸೇರಿದ ಎಲ್ಲಾ ಅಭ್ಯರ್ಥಿಗಳಿಗೆ | 160 ಸೆಂ.ಮೀ. | 76 ಸೆಂ.ಮೀ. ಕನಿಷ್ಠ ಹಿಗ್ಗುವಿಕೆ 05 ಸೆಂ.ಮೀ. ಎಂದರೆ **76 – 81 ಸೆಂ.ಮೀ.** |
| ಡಿ). | **ಮಾಜಿ–ಸೈನಿಕ ಅಭ್ಯರ್ಥಿಗಳು ಒಟ್ಟಾರೆ ದೈಹಿಕ ಮಾನದಂಡಗಳ ಸಡಿಲಿಕೆಗೆ ಅರ್ಹರಾಗಿರುತ್ತಾರೆ.** | | |

**ಅರ್ಜಿ ಸಲ್ಲಿಸುವ ವಿಧಾನ:–**

ಅರ್ಜಿಯನ್ನು ಕಡ್ಡಾಯವಾಗಿ ಆನ್‌ಲೈನ್ ವಿಧಾನದಲ್ಲಿ ಸಂಬಂಧಿತ ಆರ್‌ಆರ್‌ಸಿ'ಗೆ ಸಲ್ಲಿಸತಕ್ಕದ್ದು. ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಸೌಲಭ್ಯವು ಸಿಐಎಸ್‌ಎಫ್'ನ **www.cisfrectt.in** ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಆನ್‌ಲೈನ್ ಅರ್ಜಿಯನ್ನು ಭರ್ತಿ ಮಾಡುವ ವಿವರವಾದ ಸೂಚನೆಗಳು ಕೂಡ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಆನ್‌ಲೈನ್ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಕಡ್ಡಾಯವಾಗಿ ರೂ. 100/– (ರೂಪಾಯಿ ಒಂದು ನೂರು ಮಾತ್ರ) ಅರ್ಜಿ ಶುಲ್ಕವನ್ನು ಕ್ರೆಡಿಟ್/ಡೆಬಿಟ್/ರುಪೇ ಕಾರ್ಡ್ ಮತ್ತು ಯುಪಿಐ ಬಳಸಿಕೊಂಡು ನೆಟ್ ಬ್ಯಾಂಕಿಂಗ್ ಮೂಲಕವಾಗಲಿ ಅಥವಾ ಎಸ್‌ಬಿಐ ಚಲನ್ ಮುಖಾಂತರ ಎಸ್‌ಬಿಐ ಶಾಖೆಯಲ್ಲಿ ಪಾವತಿಸತಕ್ಕದ್ದು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಅರ್ಜಿ ಶುಲ್ಕ ವಿನಾಯಿತಿ ಇರುತ್ತದೆ.

**ಅಭ್ಯರ್ಥಿಗಳು, ಅಧಿಸೂಚನೆಯ ಸಂಪೂರ್ಣ ವಿವರಗಳಿಗಾಗಿ ದಿನಾಂಕ 21–27ನೇ ಜನವರಿ 2023ರ ಎಂಪ್ಲಾಯ್‌ಮೆಂಟ್ ನ್ಯೂಸ್/ರೋಜಗಾರ್ ಸಮಾಚಾರ್ ಪತ್ರಿಕೆಗಳಲ್ಲಿ ಮತ್ತು ಸಿಐಎಸ್‌ಎಫ್‌ನ https://cisfrectt.in ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿರುವ ಜಾಹೀರಾತು/ಅಧಿಸೂಚನೆಯನ್ನು ಪರಿಶೀಲಿಸತಕ್ಕದ್ದು. ಅರ್ಜಿದಾರರು ತಮ್ಮ ಅರ್ಜಿಗಳನ್ನು ಸಲ್ಲಿಸುವುದಕ್ಕೂ ಮುನ್ನವೇ, ಎಲ್ಲಾ ಮಾಹಿತಿಯನ್ನು ಜಾಗ್ರತೆಯಿಂದ ಓದಿಕೊಂಡು ಅರ್ಥ ಮಾಡಿಕೊಳ್ಳತಕ್ಕದ್ದು.**

**ಕೊನೆಯ ದಿನಾಂಕ**: ಈಶಾನ್ಯ ಪ್ರದೇಶದ ಅಭ್ಯರ್ಥಿಗಳೂ ಸೇರಿದಂತೆ, ಆನ್‌ಲೈನ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **22.02.2023.**